ಶ್ರೀ ಬಿ. ಎಂ. ಹೊರಕೇರಿ.—ಸ್ವಾಮಿ, ''ಭೂ ಸುಧಾರಣ ಶಾಸನ ಜಾರಿಗೊಳಿಸುವುದರಿಂದ ಹಾಗೂ ಭೂ ವ್ಯವಹಾರಗಳ ನೋಂದಣಿಗೊಳಿಸಿರುವುದರಿಂದಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಗಳ ಆದಾಯದ ಪ್ರಮುಖ ಮೂಲಗಳು ಕಡಿಮೆಯಾಗಿರುವುದು ನಿಜವಲ್ಲವೆ'' ಎಂದು ಕೇಳಿದ್ದಕ್ಕೆ 'ಅಲ್ಲ ಎಂದು ತಾವು ಉತ್ತರವನ್ನು ಕೊಟ್ಟಿದ್ದಿರಿ. ಈ ಭೂ ಸುಧಾರಣಾ ಶಾಸನ ಜಾರಿಗೆ ಬಂದಮೇಲೆ ರಾಜ್ಯದ ಎಲ್ಲ ಕಡೆ ಗಳಿಂದಲೂ ಅಂಕಿಸಂಖ್ಯೆಗಳನ್ನು ತರಿಸಿಕೊಂಡು ಈ ಉತ್ತರವನ್ನು ಹೇಳುತ್ತಿದ್ದೀರಾ, ಇಲ್ಲ ಹಾಗೇ ಹೇಳುತ್ತಿದ್ದೀರಾ ಏಕೆಂದರೆ ಈ ರ್ಯಾಂಡ್ ರೀ ಫಾರಂಸ್ ಜಾರಿಗೆ ಬಂದಮೇಲೆ ತಾಲ್ಲೂಕು ಅಭಿವೃದ್ಧಿ ಮಂಡಲಗಳ ಆದಾಯ ಕಡಿಮೆಯಾಗಿದೆ ಎಂದು ನಾನು ಕೇಳಿದ್ದೇನೆ.

† ಶ್ರೀ ಕೆ. ಪ್ರಭಾಕರ್.—ಕೊಂಚಮಟ್ಟಿಗೆ ಆದಾಯ ಕಡಿಮೆಯಾಗುತ್ತದೆ ಆದರೂ ಕೂಡ ಈ ನಾರಿ ರಿಜಿಸ್ಟ್ರೇಷನ್ ಯಾವು ಯಾವುದು ಆಗುತ್ತದೆ ಅದು ಮತ್ತೆ ಮುಂದೆ ಬರುವುದಕ್ಕೂ ಸೇರಿಸಿ ಆದಾಯ ಬರುತ್ತದೆ. ಆದರೆ ಆದಾಯಮಾತ್ರ ಕುಗ್ಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ, ಎಂ. ಹೊರಕೇರಿ.—ಸ್ವಾಮಿ, ನನ್ನ ಮುಂದಿನ ಪ್ರಶ್ನೆಯಲ್ಲ 'ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ನಿರ್ಮಿಸುತ್ತಿರುವುದು ನಿಜವೆ ಎಂದು ಕೇಳಿರುವುದಕ್ಕೆ ತಾವು 'ನಿಜ!, ಎಂದು ಉತ್ತರವನ್ನು ಕೊಟ್ಟಿದ್ದೀರಿ. ಮತ್ತು ''ಈಪ್ರಶ್ನೆಯಲ್ಲ ಮಾರುಕಟ್ಟೆ ಪ್ರದೇಶಗಳಲ್ಲಿ ವ್ಯವಸಾಯೋತ್ಪನ್ನ ಮಾರಾಟದಿಂದ ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘದವರು ಶೇಕಡ 1ರಷ್ಟು ಮೊಬಲಗನ್ನು ವಿಧಿಸಿ ತೆರಿಗೆಗಳಲ್ಲ ವಸೂಲ್ಮಾಡಿದ ಮೊಬಲಗಿನ ಹಣವನ್ನು ಮುಂಜೂರು ಮಾಡುವ ಸಲಹೆ ಏನಾದರೂ ಇದೆಯೆ ಎಂದು ಕೇಳಿದರೆ ''ಇಲ್ಲ' ಎಂದು ಉತ್ತರವನ್ನು ಕೊಟ್ಟಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯೋತ್ಪನ್ನ ಸಾಮಾನುಗಳನ್ನು ಸಾಗಣಿ ಮಾಡಬೇಕಾದರೆ ಮಾರ್ಕೆಟ್ ರೋಡ್ಸ್ ಆಗಬೇಕು, ಇದಕ್ಕೆ ಹಣವನ್ನು .....

ಶ್ರೀ ಕೆ. ಪ್ರಭಾಕರ್.—ಮಾರ್ಕೆಟ್ ಕಮಿಟಿಯವರು ಸ್ಟೇಟ್ ರೋಡ್ ಫಂಡ್‌ಗೆ ಎಂದು ಹಣವನ್ನು ಕೊಡುತ್ತಾರೆ. ಆದರೆ ತಾಲ್ಲೂಕು ಬೋರ್ಡ್‌ಗೆ ನೇರವಾಗಿ ದುಡ್ಡನ್ನು ಕೊಡುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಬಿ. ಎಂ. ಹೊರಕೇರಿ.—ಸ್ವಾಮಿ, ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ರಸ್ತೆಗಳನ್ನು ಅಂದರೆ ಮಾರ್ಕೆಟ್ ರಸ್ತೆಗಳನ್ನು ಒಕ್ಕಲುತನದವರು ಕೊಟ್ಟ ಸೆಸ್‌ನಿಂದ ರಸ್ತೆಗಳನ್ನು ಮಾಡುವುದಕ್ಕಾಗುವುದಿಲ್ಲ ಎಂದರೆ ಇನ್ನು ಯಾವುದರಿಂದ ನೀವು ಮಾಡುತ್ತೀರಿ ? ಏಜೆನ್ಸಿಗಳಿಂದ ಏನಾದರೂ ಮಾಡಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ತಾವು ಹೇಳುತ್ತಿರುವುದು ಸರಿ, ಅದು ಆಗುತ್ತಿರುವುದೂ ಸರಿ.

Expenditure Incurred by Forest Divisions, Shimoga District.

218. SRI KONANDUR LINGAPPA (Thirthahalli).—Will the Minister of State for Forests be pleased to state :

(*a*) the expenditure incurred by the Forest Department during the last five years *i e*, 1972-73 to 1976-77 in Thirthahalli Constituency (Thirthahalli Taluk and Nagara Hobli) of Hosanagar Taluk, Shimoga District :

(*b*) the works for which the amount has been spent and to be spent.

SRI H. C. SRIKANTAIAH (Minister of State for Forests.—(*a*) (1) Rs. 23,38 398.89 has been spent by the Forest Divisions of Shimoga for various works pertaining to Thirthahalli Taluk from 1972-73 to 1976-77 (upto September 1976).

(2) Rs. 165, 887.00 has been spent for various works by the Forest Division, Sagar, Nagara Hobli of Hosanagar Taluk of Thirthahalli Constituency from 1972-1973 to 1976-77(upto September 1976).

(*b*) details are given in the statements placed on the Table of the House.

ಶ್ರೀ ಕೋಣಂದೂರು ಲಿಂಗಪ್ಪ :—ನನ್ನ ಈ ಪ್ರಶ್ನೆಗೆ ಉಪಪ್ರಶ್ನೆಗಳೇನು ಇಲ್ಲ.

Expenditure Incurred by Mines and Geology Department in Shimoga District.

229 SRI KONANDUR LINGAPPA (Thirthahalli) —Will the Minister for Industries and Parliamentary Affairs be pleased to state.—

(*a*) the expenditure incurred by the Mines and Geology of Industries Department in Thirthahalli Constituency of Shimoga District (Thirthahalli Taluk and Nagara hobli of Hosanagar Taluk) during the last 5 years *i.e.* from 1972-73 to 1976-77.

(*b*) kind of work for which the expenditure is incurred and is being incurred ?

SRI M. VEERAPPA MOILY (Minister of State for Small Scale Industries) [on behalf of SRI S. M. KRISHNA (Minister for Industries and Parliamentary Affairs)].—

(*a*) The Mines and Gology Department has not under taken any type of work in Thirthahalli and Nagara hobli of Hosanagar Taluk. Hence there is no expenditure.

(*b*) This question does not arise in view of reply to clause (a) above.

ಶ್ರೀ ಕೋಣಂದೂರು ಲಿಂಗಪ್ಪ :—ಸ್ವಾಮಿ, ನನಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಲ್ಲಿ 'ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ನಗರ ಹೋಬಳಿಗಳಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಯಾವ ವಿಧವಾದ ಕೆಲಸವನ್ನೂ ಕೈಗೊಂಡಿಲ್ಲ' ಎಂದು ಹೇಳಿದ್ದಾರೆ. ಸರ್ಕಾರ ತಾವು ಮಾಡಿದ ಕೆಲಸ ತಮಗೇ ಗೊತ್ತಿಲ್ಲ ಎಂದು ಹೇಳುವುದು ಆಶ್ಚರ್ಯಕರವಾದುದು. ನನಗೇ ಗೊತ್ತಿರುವಂತೆ ಕುಮುದಾವತಿ ನಗರದಲ್ಲಿ ಕೆಲಸವಾಗಿದೆ, ಅದರ ಬಗ್ಗೆ ಉತ್ತರವನ್ನೇ ಹೇಳಿಲ್ಲ.